# ಕಾನನ

## ನಿಸರ್ಗದೆಡೆಗೆ ಪಯಣ

ಏಪ್ರಿಲ್ 2014



BANNERUGHATTA WILDLIFE CONSERVATION GROUP

# ಕಾನನ

ನಿಸರ್ಗದೆಡೆಗೆ ಪಯಣ

**ಸಂಪಾದಕೀಯ**

ಅಶ್ವಥ ಕೆ.ಎನ್

**ಲೇಖನ ವೃಂದ**

ಸ್ವಾಮಿ ಸೌಖ್ಯಾನಂದಜೀ ಮಹಾರಾಜ್

ಮಹದೇವ ಕೆ.ಸಿ

ಅಶ್ವಥ ಕೆ.ಎನ್

ಶಂಕರಪ್ಪ ಕೆ.ಪಿ

ಸುಬ್ಬು ಬಾದಲ್

ಕೃಷ್ಣನಾಯಕ್

**ಕರಡು ತಿದ್ದುಪಡಿ**

ಮುರಳಿ ಎಸ್

**ವಿನ್ಯಾಸ**

ಮಹದೇವ ಕೆ.ಸಿ

**ಛಾಯಾಚಿತ್ರ**

ಕಾರ್ತಿಕ್ ಎ.ಕೆ


**ಇ–ವಿಳಾಸ**

kaanana.mag@gmail.com

www.issuu.com/kaanana


**ಮುಖಪುಟ**

ವಿಶ್ವ ಭೂದಿನದ ವರ್ಣಚಿತ್ರ

BANNERUGHATTA WILDLIFE CONSERVATION GROUP




ಸಂಪಾದಕೀಯ



ಬಕಪಕ್ಷಿ



ಚಿಟ್ಟೆ ಗುರುತು



ಕಾಡುವ ಕಾಗೆಗಳು



ಡೋಡೋ ಹಾದಿಯಲ್ಲಿ ನೀಲಿ ಕಾಲಿನ ಬೂಬು



ಪ್ರಕೃತಿ ಬಿಂಬ



ಪರಿಸರ ದಿನ

# ಸಂಪಾದಕೀಯ

ಹುಟ್ಟಿದ ಪ್ರತಿಯೊಬ್ಬರು ತಮ್ಮ ತಮ್ಮ ಹುಟ್ಟು ಹಬ್ಬದ ದಿನ ಎಲ್ಲಿಲ್ಲದ ಉತ್ಸಾಹದಿಂದ ನಲಿಯುತ್ತಾ ಆಚರಿಸಿಕೊಳ್ಳುತ್ತೇವೆ, ಹಾಗೆಯೇ ನಮ್ಮ ಭೂಮಿಗೂ ಬರ್ತ್ ಡೇ ಇದೇ ಎಂಬುದು ಗೊತ್ತೇನು? ಹೌದು. ಇದೇ ತಿಂಗಳ 22ನೇ ತಾರೀಕು "**ವಿಶ್ವ ಭೂದಿನ**". ಏಪ್ರಿಲ್ ತಿಂಗಳು ಬಂತೆಂದರೆ ಕಾಡಿನಲ್ಲಿ ಎಲ್ಲಿಲ್ಲದ ಉತ್ಸಾಹ ತುಂಬುತ್ತದೆ. ಮರಗಳೆಲ್ಲ ಚಿಗುರೊಡೆದು ಅರಣ್ಯದೇವಿ ಹಸಿರು ಸೀರೆಯನುಟ್ಟಂತೆ ಕಾಣುತ್ತಿರುತ್ತಾಳೆ. ವನ್ಯಮೃಗಗಳು, ಪಕ್ಷಿಗಳಿಗೋ ಹಬ್ಬದ ಸಂಭ್ರಮ, ಹೀಗೆ ಕಾಣುವ ವನದೇವಿಗೆ ನಾವೆಲ್ಲ ನಮಿಸಲೇಬೇಕು.


ಆದರೆ ನಾವು ನಮ್ಮ ಸ್ವಾರ್ಥತೆಯಿಂದ ಪ್ರಕೃತಿಯಲ್ಲಿ ನಾವು ಯಾರೆಂಬುದ್ದನ್ನು ಮರೆಯುತ್ತಿದ್ದೇವೆ.
ಪ್ರಕೃತಿಯಲ್ಲಿ ನಾವು ಎಲ್ಲ ಜೀವಿಗಳಂತೆ ಒಂದು ಜೀವಿ. ಆದರೆ ಸ್ವಲ್ಪ ಬುದ್ಧಿವಂತ ಅಷ್ಟೆ. ಆದರೆ ನಾವು ಎಲ್ಲ ಜೀವಿಗಳಂತೆ ಬದುಕದೆ ನಮ್ಮ ಐಶಾರಾಮಿ ಬದುಕಿಗಾಗಿ, ನಮ್ಮಂತೆ ಇರುವ ಇನ್ನಿತರ ಪ್ರಾಣಿ-ಪಕ್ಷಿಗಳ ಪ್ರಾಣಕ್ಕೆ ಸಂಚಕಾರ ತಂದೊಡ್ಡಿದ್ದೇವೆ. ಭೂತಾಯಿಯ ಒಡಲಾಳವನ್ನು ಬಗೆದು ಗಣಿಗಾರಿಕೆ ಮಾಡಿ, ಆಕೆಯ ಒಡಲು ಬರಿದಾಗಿಸುತ್ತಿದ್ದೇವೆ. "ಭೂದಿನ" ಎಂದು ಒಂದು ದಿನ ಮಾತ್ರ ನಾಲ್ಕು ಗಿಡ ನೆಟ್ಟು, ಹತ್ತು ಪೋಟೋ ತೆಗೆದು. ಏನೋ ದೇಶೋದ್ಧಾರ ಕೆಲಸ ಮಾಡಿರುವಂತೆ ನಾವು ನಮ್ಮ ಫೋಟೋಗಳನ್ನು ಪೇಸ್ಬುಕ್ ನಲ್ಲಿ ಅಂಟಿಸಿ, ಕೈತೊಳೆದುಕೊಳ್ಳುತ್ತಿದ್ದೇವೆ. ಆದರೆ ಇಂತಹ ಪೊಳ್ಳು ಕಾರ್ಯಕ್ರಮಗಳಿಂದಲೇ ಪರಿಸರ ಮಲಿನಗೊಳ್ಳುತ್ತಿರುವುದು ವಿಷಾದಕರ ಸಂಗತಿ. ಹೆಚ್ಚಾಗುತ್ತಿರುವ ಜನಸಂಖ್ಯೆಯಿಂದ ನಮ್ಮ ವಸತಿಗಳಿಗಾಗಿ, ಎಷ್ಟೋ ಕೆರೆಗಳು ಇಂದು ಬಡಾವಣೆಗಳಾಗಿ ಮಾರ್ಪಟ್ಟಿವೆ. ಅಳಿದುಳಿದ ಕೆರೆಗಳನ್ನು ಕಲುಷಿತ ನೀರಿನ ಹಾಗೂ ಕಸದಗುಂಡಿಗಳನ್ನಾಗಿ ತಮ್ಮ ಸ್ವರೂಪವನ್ನು ನಾವು ಬದಲಿಸಿದ್ದೇವೆ. ಇದರಿಂದ ಕೆರೆಯಲ್ಲಿನ ಎಷ್ಟೋ ಜಲಚರಗಳ ಮಾರಣಹೋಮಕ್ಕೆ ಮಾನವರಾದ ನಾವೇ ನೇರ ಹೊಣೆಗಾರರಾಗಿದ್ದೇವೆ.

ಕೇವಲ ಏಪ್ರಿಲ್ 22ರಂದು ಮಾತ್ರ "**ಭೂ ದಿನ**" ಎಂದು ನಾಲ್ಕು ಸಸಿ ನೆಟ್ಟು ಬಿಂದಿಗೆ ನೀರು ಸುರಿಯುವುದಲ್ಲ, ನಾಗೇಶ್ ಹೆಗಡೆ ಯವರು ಹೇಳುವಂತೆ ಪ್ರತೀ ದಿನ ಪರಿಸರದಿನವಾಗಬೇಕು, ಇಂತಹ ದಿನಗಳಲ್ಲಿ ಜನರಲ್ಲಿ ಭೂಮಿ ಮತ್ತು ಮಾನವರ ಜೊತೆಗಿನ ಸಂಬಂಧದ ಬಗ್ಗೆ ಅರಿವನ್ನು ಮೂಡಿಸುವ, ಮಾನವ ಭೂಮಿಯ ಮೇಲೆ ನಡಿಸುತ್ತಿರುವ ದಬ್ಬಳಿಕೆಯ ಪರಿಣಾಮಗಳ ಬಗ್ಗೆ ಅರಿವನ್ನು ಮೂಡಿಸಿದರೆ "ಭೂ ದಿನ" ಕ್ಕೆ ಒಂದು ಪರಿಪೂರ್ಣ ಅರ್ಥಸಿಗಬಹುದು.

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

**ಇ-ಅಂಚೆ :** kaanana.mag@gmail.com

**Wildlife Conservation Group**



# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು


### * ಬಕಪಕ್ಷಿ

ನಾವು ನಮ್ಮ ಜೀವನದಲ್ಲಿ ಯಾವುದೇ ಕ್ಷೇತ್ರದಲ್ಲಿಯಾದರೂ ಸಹ ಯಶಸ್ವಿಯಾಗಬೇಕಾದರೆ ನಾವು ಏಕಾಗ್ರತೆಯನ್ನು ಪಡೆದಿರಬೇಕಾಗುತ್ತದೆ. ಈ ಏಕಾಗ್ರತೆ ಎಂದರೇನು? ಯಾರಿಗೂ ಸಹ ತಿಳಿಯದು ಇದನ್ನು ಶ್ರೀರಾಮಕೃಷ್ಣರು ಈ ದೃಷ್ಟಾಂತದ ಮುಖಾಂತರ ಎಲ್ಲರಿಗೂ ಸಹ ಅರ್ಥವಾಗುವಂತೆ ತಿಳಿಸುತ್ತಾರೆ.




ನೋಡಿ ! ಒಂದು ಸಣ್ಣ ಕೆರೆ, ಆ ಕೆರೆಯಲ್ಲಿ ಅನೇಕ ಮೀನುಗಳು, ಅಲ್ಲದೆ ಮೀನು ಹಿಡಿಯಲು ಅನೇಕ ಬಗೆಯ ಪಕ್ಷಿಗಳು ಬರುತ್ತಿದ್ದವು. ಅದರಲ್ಲಿ ಬಕಪಕ್ಷಿ ಸಹ ಒಂದು. ಬಕಪಕ್ಷಿ ನೀರಿನಲ್ಲಿ ಒಂದು ಕಡೆ ಕಲ್ಲುಬಂಡೆಯಂತೆ ಸುಮ್ಮನೆ ಮೀನು ಬರುವುದನ್ನೇ ತದೇಕಚಿತ್ತ ದಿಂದ ನೋಡುತ್ತಿರುತ್ತದೆ, ಅದರಿಂದ ಹಿಂದಿನಿಂದ ಒಬ್ಬ ಬೇಡನು ಬಂದು ಅದಕ್ಕೆ ಗುರಿಯಿಟ್ಟು ಹೊಡೆದರೂ ಸಹ ಅದಕ್ಕೆ ಆ ಬೇಡ ಬಂದಿರುವುದು ತಿಳಿಯುವುದಿಲ್ಲ. ಅದು ತದೇಕಚಿತ್ತದಿಂದ ಮೀನು ಬರುವಿಕೆಯಲ್ಲೇ ತಾನು ತನ್ನ ಸುತ್ತಾ ಏನು ನಡೆಯುತ್ತದೆ ಎಂಬುದನ್ನೇ ಮರೆತುಬಿಡುತ್ತದೆ! ಅದೇರೀತಿ ನಾವು ಭಗವಂತನ ಧ್ಯಾನ ಮಾಡುವಾಗ ಎಲ್ಲವನ್ನು ಮರೆತು ಭಗವಂತನ ಚಿಂತೆಯಲ್ಲಿ ಮಗ್ನರಾಗಬೇಕು ಅಥವಾ ಯಾವ ಕೆಲಸವನ್ನು ಮಾಡುತ್ತಿರುತ್ತೇವೆಯೋ ಅದರಲ್ಲಿ ತಲ್ಲೀನರಾಗಬೇಕು ಅದಕ್ಕೆ ಏಕಾಗ್ರತೆ ಎನ್ನುವುದು;

“ಅದಕ್ಕೆ ಹೇಳು ಬಕೋಧ್ಯಾನಂ” “ ಬಕಪಕ್ಕಿಯಂತೆ ಧ್ಯಾನ ಮಾಡಬೇಕು” ಎಂದು.



- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್



# ಚಿಟ್ಟೆ ಗುರುತು

* ಕಪಿಲ

Tawny Coster
*Acraea terpsicore*

ಪರೀಕ್ಷೆ ಮುಗಿಸಿ ಬೇಸಿಗೆಯ ರಜೆ ನಾವೆಲ್ಲಾ ಪ್ರವಾಸ ಹೊರಟೆವು. ಅದೊಂದು ಸುಂದರ ಪ್ರದೇಶ, ಊರಪಕ್ಕದಲ್ಲೆ ಹರಿಯುತ್ತಿದ್ದ ನದಿ ಸುತ್ತಲೂ ಉತ್ತಮ ಪರಿಸರ. ನಾನು ಮತ್ತು ಗೆಳೆಯರು ದಿನನಿತ್ಯ ನದಿಯಲ್ಲಿ ಮಿಂದು ಬಟ್ಟೆ ಒಗೆದು, ಆಟ ಆಡುವುದೇ ದಿನಚರಿಯಾಗಿತ್ತು. ಒಮ್ಮೆ ನದಿಯಲ್ಲಿ ಆಟವಾಡಿ ಬರುತ್ತಿರಬೇಕಾದರೆ ಡ್ಯಾನಿಯು " ಅಣ್ಣ ಇಲ್ನೋಡು ಈ ಹುಳ ಹೆಂಗದೆ" ಎಂದು, ಒಂದು ಕೆಂಪನೆಯ ಕಂಬಳಿ ಹುಳುವಿನಂತಾ ಹುಳುವನ್ನ ತೋರಿಸಿದ. ಅದನ್ನು ಗಮನಿಸಿದಾಗ ಅದರ ಮೈಮೇಲೆಲ್ಲಾ ಉದ್ದನೆಯ ಮುಳ್ಳುಗಳೂ ಇದ್ದವು. ಈ ಹುಳುವೇ ಮುಂದೆ ಚಿಟ್ಟೆಯಾಗುತ್ತದೆ ಎಂದು ವಿವರಿಸುತ್ತಾ ಮನೆಯತ್ತ ನಡೆದೆವು.

ಎರಡು ಮೂರು ದಿನದ ಬಳಿಕ ಆ ಹುಳುವನ್ನ ಗಮನಿಸಿದಾಗ ಆ ಹುಳು ಪೂಪಾವಾಗಿ ಪರಿವರ್ತನೆಗೊಂಡಿತ್ತು. ಇದು ಯಾವ ಚಿಟ್ಟೆಯಾಗುತ್ತದೆ ನೋಡೋಣ ಎಂದು. ಕಡ್ಡಿಯ ಸಮೇತ ಕಿತ್ತುತಂದು ಮನೆಯ ಬಳಿ ಇಟ್ಟು ಸುತ್ತಲು ಪರದೆ ಕಟ್ಟಿದೆವು. ಕೆಲ ದಿನದ ನಂತರ ಆ ಪೂಪಾದಿಂದ ಒಂದು ಸುಂದರ ಚಿಟ್ಟೆ ಹೊರ ಬಂದಿತ್ತು, ಅದೇ **"ಕಪಿಲ"** (TAWNY COSTER).








ಈ ಚಿಟ್ಟೆ ತ್ರಿಕೋನ ಆಕರ, ಸಾಮಾನ್ಯವಾಗಿ ವರ್ಷವಿಡಿ ಉದ್ಯಾನ, ಕಾಡುಗಳಲ್ಲಿ ನೋಡಬಹುದು. ಭಾರತ, ಪಾಕಿಸ್ತಾನ, ನೇಪಾಳ ಹಾಗೂ ಹಿಮಾಲಯದ 1500 ಅಡಿ ಎತ್ತರದಲ್ಲೂ ನೋಡಬಹುದು. ನೆಲದ ಮಟ್ಟದಲ್ಲೇ ಹಾರಾಡುವ ಇವುಗಳ ರೆಕ್ಕೆಗಳು 50-65ಮಿಮಿ ಇರುತ್ತದೆ. ಕೆಂಪುಬಣ್ಣದ ರೆಕ್ಕೆಗಳಿದ್ದು, ರೆಕ್ಕೆಗಳ ತುದಿಯಲ್ಲಿ ಬಿಳಿ ಚುಕ್ಕಿಗಳಿದ್ದವು, ಅವು ಕಪ್ಪುಬಣ್ಣದಿಂದ ಆವೃತವಾಗಿರುತ್ತದೆ. ಗಂಡು-ಹೆಣ್ಣು ನೋಡಲು ಯಾವುದೇ ವ್ಯತ್ಯಾಸವಿರುವುದಿಲ್ಲ. ವಿಶೇಷವೆಂದರೆ ಇವು ವೈರಿಗಳಿಂದ ತಪ್ಪಿಸಿಕೊಳ್ಳಲು ತಮ್ಮ ಕಾಲುಗಳಿಂದ ಕೆಟ್ಟವಾಸನೆಯನ್ನು ಸೂಸುವ ದ್ರವವನ್ನ ಸ್ರವಿಸುತ್ತವೆ ಹಾಗೂ ವೈರಿಗಳು ಇವನ್ನ ತಿಂದರೇ ಯಾವುದೇ ರುಚಿಸಿಗಿವುದಿಲ್ಲ.

ಇನ್ನೊಂದು ವಿಶೇಷತೆಯೆಂದರೆ ಗಂಡು ಹೆಣ್ಣಿನ ಮಿಲನದ ನಂತರ ಹೆಣ್ಣಿನ ಹೊಟ್ಟೆಯ ತುದಿಯಲ್ಲಿ ಒಂದು ಗಟ್ಟಿಯಾದ ಪರದೆಯನ್ನ ಬೆಳಸಿಕೊಳ್ಳುತ್ತದೆ ಇದರಿಂದ ಮತ್ತೊಂದು ಮಿಲನಕ್ಕೆ ಅವಕಾಶ ಇರುವುದಿಲ್ಲ.



- ಮಹದೇವ ಕೆ.ಸಿ




# ಹಕ್ಕಿಲೋಕ

*** ಕಾಡುವ ಕಾಗೆಗಳು**

**ಇಂಗ್ಲೀಷ್ ಹೆಸರು : House Crow**

**ವೈಜ್ಞಾನಿಕ ಹೆಸರು : *Corvus splendens***

ಏಪ್ರಿಲ್ ತಿಂಗಳ ಎರಡು ವಾರಗಳು ಮುಗಿಯುತ್ತಾ ಬಂದರೂ ಮಳೆಯ ಸುಳಿವೆ ಇಲ್ಲದೆ ಬೆಳಗ್ಗೆಯೇ ಉರಿಬಿಸಿಲು ಶುರುವಾಗುತ್ತಿತ್ತು. ರಾತ್ರಿ ಮರದ ಎಲೆಗಳು ಕೂಡ ಅಲುಗಾಡದೆ ಗಾಳಿ ತಟಸ್ಥವಾಗಿ ನಿಂತು ಹೋಗುತ್ತಿತ್ತು. ಅತ್ತ ಗಾಳಿ ಇಲ್ಲದೆ, ಸೆಕೆಯೂ ಶುರುವಾಗಿ ನೆತ್ತಿ, ಬೆನ್ನಿನಲ್ಲಿ ಶೆಕೆಯ ನೀರು ಯಾವುದೋ ಕೀಟ ಹರಿದಾಡುವಂತೆ ಗಲಿ-ಬಿಲಿಯಾಗುತ್ತಿತ್ತು. ಅಂತಹದರಲ್ಲಿ ಕಂಬಳಿ ಮೈಮೇಲೆ ಹಾಕಿಕೊಳ್ಳುವುದಿರಲಿ, ಮೈಮೇಲೆ ಇರುವ ಬಟ್ಟೆಗಳನ್ನು ಬಿಚ್ಚಿಬಿಸಾಡುವ ಕೋಪಬರುತ್ತದೆ. ಕಂಬಳಿ ಹಾಕಿಕೊಂಡರೇ ವಿಪರೀತ ಶೆಕೆ!, ಕಂಬಳಿ ತೆಗೆದರೆ ವಿಪರೀತ ಸೊಳ್ಳೆಗಳ ಕಾಟ!. ಕಿವಿಯ ಬಳಿಯೇ ಗುಯ್ ಗುಡುತ್ತಾ ಬೇಡವಾದ ಪದಗಳನ್ನು ಹಾಡುತ್ತವೆ. ಅಂತಹ ಯಾತನೆಯನ್ನು ಅನುಭವಿಸಲಾಗದೆ ಮೇಲೆದ್ದು ಮನೆಯ ಸೂರಿನಲ್ಲಿ ಸಿಕ್ಕಿಸಿಟ್ಟಿದ್ದ ಮೀನಿನ ಬಲೆಯನ್ನು ಹೆಗಲಿಗೇರಿಸಿಕೊಂಡು ನೇರ ಮನೆಯ ಕಡೆಗೆಬಂದು ಬಾಗಿಲನ್ನು ತಟ್ಟಿದ. . . ಸೆಕೆ, ಸೊಳ್ಳೆಗಳ ಕಾಟಕ್ಕೆ ನಿದ್ದೆ ಬಾರದೆ ಹಾಗೆ ರಾತ್ರಿಯ ಕತ್ತಲ್ಲಲ್ಲಿ ಸಣ್ಣ ಬುಡ್ಡಿಯ ದೀಪದ ಬೆಳಕಿಗೆ ಬರುವ ಕೀಟಗಳನ್ನು ನೋಡುತ್ತಾ ಮಲಗಿಕೊಂಡು, ಯಾರದು? ಎಂದೆ. ಹೊರಗಡೆಯಿಂದ ’ನಾನು ಸುಬ್ಬನ್’ ಎಂಬ ಶಬ್ಧ ವಾಪಸ್ ಬಂದು ನನ್ನ ಕಿವಿಮುಟ್ಟಿತು. ಹೋಗಿ ಬಾಗಿಲು ತೆಗೆದೆ ಸುಬ್ಬನ್ ಸಾಬಿ ಕಂಕುಳಲ್ಲಿ ಮೀನು ಹಿಡಿಯುವ ಬಲೆ ಇತ್ತು. “ಏನ್ ಸುಬ್ಬನ್ ಇಷ್ಟೋತಲ್ಲಿ " ಎಂದೆ. “ಏ. . . ತುಂಬ ಸೆಕೆ!, ಅದ್ರಲಿ ಇವ್ ಪಡೆಕಿತೋಗ ಈ ಮಗ್ನೋವ್ ಸೊಳ್ಳೆ ಕಾಟ ಬೇರೆ!. ಬಾ ಮಾರಾಯ ಕೆರೆ ಕಡೆ ಹೋಗಿ ಈ ಬಲೆನಾದ್ರು ಬಿಟ್ ಬರಾನ. . .” ಎಂದ.



ಏನ್ ಈ ಕತ್ತಲ್ಲಲ್ಲಿ ಹೋಗೋದು ಅನಿಸಿದ್ರು, ಈ ಸೆಕೆ, ಸೊಳ್ಳೆ ಕಾಟಕ್ಕೆ ತಡೆಯಲಾಗದೆ ಹೋಗಿ ಬರೋಣ ಅನಿಸಿತು. “ಹೋ ನೆಡಿ ಸುಬ್ಬನ್ ಹೋಗಿ ಬರೋಣ ಎಂದು ಕಗ್ಗತ್ತಲ್ಲಲ್ಲಿ ಕೆರೆಯ ಕಡೆ ಹೊರಟೆವು. ಕೆರೆಯಲ್ಲಿ ಅಷ್ಟೇನು ನೀರು ಇಲ್ಲದಿದ್ದರು ಸ್ವಲ್ಪ ಮಟ್ಟಿಗೆ ಇತ್ತು. ಆ ಇದ್ದ ನೀರಲ್ಲೆ ಎದೆ ಮಟ್ಟಕ್ಕೆ ಇಳಿದು ಬಲೆಯನ್ನು ಬಿಟ್ಟು ನೇರಾ ಮನೆಯ ಕಡೆ ಬಂದೆವು. ನನ್ನನ್ನು ಮನೆಗೆ ಬಿಟ್ಟು ಸುಬ್ಬನ್ ಸಾಬಿ ಹೊರಟು ಹೋದ. ನನಗೆ ನಿದ್ದೆ ಬಾರದೆ ಹಾಗೆ-ಹೀಗೆ ಒದ್ದಾಡುತ್ತ ಬಾರದ ನಿದ್ದೆಯನ್ನು ಬರಸಿಕೊಳ್ಳಲು ಪ್ರಯತ್ನಗಳು ನಡೆಯುತ್ತಲೇ ಇದ್ದು, ನನಗೆ ತಿಳಿಯದೆಯೇ ಯಾವಗಲೋ ನಿದ್ದೆಗೆ ಜಾರಿದ್ದೆ. ಬೆಳಗ್ಗೆ ಸುಬ್ಬನ್ ಸಾಬಿ ಬಂದು ಎಬ್ಬರಿಸಿದಾಗಲೆ ನನಗೆ ಎಚ್ಚರಿಕೆಯಾಗಿದ್ದು, "ಬಾ ಮಾರಾಯ ಇನ್ನೋ ನಿದ್ದೆ ಬಿಟ್ಟಿಲ್ಲ ನಿಂಗೆ ಬಲೆಗೆ ಮೀನ್-ಗೀನ್

ಬಿದ್ದಿದಾವ ನೋಡ್ಕೊ ಬರಾನಾ" ಎಂದ. ಎದ್ದು ಕಣ್ಣುಜ್ಜಿಕೊಂಡು ಹೊರಗೆ ಬಂದೆ. ಆಗ ತಾನೆ ಮೂಡಣದಲ್ಲಿ ಸೂರ್ಯ ಬಾರಾದಿದ್ದರೂ ಬೆಳಕು ಮಾತ್ರ ಹಾಗಿತ್ತು. ಕೆರೆಯ ದಾರಿ ಹಿಡಿದು ಹೊರಟೆವು. ಸುಬ್ಬನ್ ಸಾಬಿ ನೀರಿಗಿಳಿದು ಬಲೆಯನ್ನು ಶೋಧಿಸುತ್ತಿದ್ದ ದಪ್ಪನೆಯ ಎರಡು-ಮೂರು ಮೀನುಗಳು ಬಲೆಗೆ ಸಿಕ್ಕಿಬಿದ್ದಿದ್ದವು. ಕಷ್ಟಬಿದ್ದು ಬಲೆಯಿಂದ ಬಿಡಿಸಿ ದಡಕ್ಕೆ ಎಸೆಯುತ್ತಿದ್ದ ನಾನು ದಡದಲ್ಲಿ ನಿಂತು ತೆವಳುತ್ತಾ ಎಗರುತ್ತಾ ಮತ್ತೆ ನೀರಿನೆಡೆಗೆ ಹಾರುತ್ತ ಇದ್ದ ಮೀನುಗಳನ್ನು ಹಿಡಿದು ಚೀಲದೊಳಕ್ಕೆ ತುಂಬುತ್ತಿದ್ದೆ. ಒಂದು ದಪ್ಪನೆ ಮೀನು ಸುಬ್ಬನ್ ಸಾಬಿಯ ಕೈಯಿಂದ ಜಾರಿ ನೀರಿನಲ್ಲಿ ಮುಳುಗಿ ತಪಿಸಿಕೊಂಡು ಹೋಯಿತು. ಸುಬ್ಬನ್ ಸಾಬಿಗೆ ತುಂಬ ಬೇಜಾರಾಗಿ ತುತ್ ತೇರಿ ಇಸ್ಕಿ ಮಾಕಿ ಎಂಥ ದಪ್ಪ ಮೀನು ! ಕಮ್ಮಿ ಅಂದರು ಎರಡು-ಮೂರು ಕೆಜಿ ಬರುತ್ತಿತ್ತು, ತಪಸ್ಕೋಬಿಡ್ತು ಮಾರಾಯ! ಎಂದು ಕೈ ಕೈ ಇಸುಕಿಕೊಳ್ಳುತ್ತಿದ್ದ.

ಅಷ್ಟರಲ್ಲಿ ಕೆರೆಯಿಂದ ಸ್ವಲ್ಪ ದೂರದಲ್ಲಿ ಒಂದು ಕಪ್ಪುಬಣ್ಣದ ಬಸ್ಸು ಬಂದು ನಿಂತಿತು. ನಾನು ಹಾಗೆ ದಿಟ್ಟಿಸಿದೆ. "ಯಾವುದು ಇದು. . . ಗಾಡಿ!, ಕೆರೆಯ ಕಡೆ ಯಾಕೆ ಬಂದಿದೆ" ಎಂದು ಯೋಚಿಸುವುದರೊಳಗೆ ಗಾಡಿಯಿಂದ ಒಬ್ಬ ಕೆಳಗಿಳಿದ, ಆಳು ನೋಡಲು ಎತ್ತರಕ್ಕೆ, ತಲೆಯ ಮೇಲೆ ಮಿಲಿಟರಿ ಟೋಪಿ, ಮೈಮೇಲೆ ಬಿಳಿಯ ಟೀಷರ್ಟ್, ಕಾಕಿ ಬಣ್ಣದ ಪ್ಯಾಂಟುದಾರಿ. . . ಬೂಟುಗಳಾಕಿದ್ದ. ದೂರಕ್ಕೆ ಪೊಲೀಸ್ ಅಲ್ಲದಿದ್ದರೂ ಅವನು ಪೊಲೀಸಿನವನೆ ಎಂಬ ಗುಮನಿ ಬರುವಂತಿತ್ತು. ಹಾಗೇ ಸುಬ್ಬನ್ ಸಾಬಿ ಮತ್ತು ನಾನು ನೋಡುತ್ತಾ ನಿಂತೆವು, ಗಾಡಿಯಿಂದ ಒಬ್ಬೊಬ್ಬರೆ ಹುಲಿಗಳಂತಹ ದಷ್ಟ-ಪುಷ್ಟ ನಾಯಿಗಳನ್ನು ಹಿಡಿದುಕೊಂಡು ಕೆಳಗಿಳಿಯುತ್ತಿದ್ದರು. ಸುಮಾರು ಹತ್ತು-ಹದಿನೈದು ಜನರು. ಜೊತೆಯಲ್ಲಿ ನಾಯಿಗಳು.

WCG




ಸುಬ್ಬನ್ ಸಾಬಿ ಬಲೆಯನ್ನು ಅಸಬಸ ಮಡಚಿಕೊಂಡು ನಡಿ ಹೋಗನಾ ಎಂದು ಮನೆಯ ದಾರಿಯನ್ನು ಹಿಡಿದೆವು, ಕೆರೆಯ ಮೇಲಿನ ಬಯಲು ಪ್ರದೇಶ ಆ ಬಯಲಿನ ಕಾಲುದಾರಿಯಲ್ಲಿ ನಡೆಯುತ್ತಾ ಹೋಗುತ್ತಿದ್ದೆವು, "ಏ. . . ಡಾಂಕಿ. . . ಪಾಂಕಿ. . . ಪಿಂಕಿ. . . ಸ್ಟಾಪ್. . .ಸ್ಟಾಪ್. . .ಸ್ಟಾಪ್. . .ಕಮ್. . . ಕಮ್. . . ಕಮ್ ಇಯರ್" ಎಂಬ ಶಬ್ಧ ಹಿಂದೆಯಿಂದ ಜೋರಾಗಿ ಕಿರುಚಾಟ ಕೇಳಿಸಿತು. ಒಮ್ಮೆ ಹಿಂದೆ ತಿರುಗಿ ನೋಡಿದೆವು! ಮೂರು ನಾಯಿಗಳು ಹಸಿದ ಹೆಬ್ಬುಲಿಗಳಂತೆ ತಾ ಮುಂದು ನೀ ಮುಂದು ಎಂದು ನಮ್ಮತ್ತಲೇ ದಾವಿಸಿ ಬರುವುದನ್ನು ಕಂಡು ಕ್ಷಣದಲ್ಲಿ ತಲೆಯ ಮೇಲಿನ ಕೂದಲುಗಳು ನಿಮಿರಿ ನಿಂತು ಸುಬ್ಬನ್ ಸಾಬಿಗೆ ಚಳಿಗುಳ್ಳೆಗಳು ಮೈಯೆಲ್ಲ ಬಂದು ಓಡಲಾಗದೆ ಓಡಲು ಪ್ರಾರಂಭಿಸಿದ. ನಾನು ದಿಕ್ಕಾಪಾಲಾಗಿ ರನ್ನಿಂಗ್ ರೇಸ್ನಲ್ಲಿ ಓಡುವಂತೆ ಜೋರಾಗಿ ಓಡುತ್ತಿದೆ. ಹಿಂದೆ ಆ ಪೊಲೀಸ್ ನಾಯಿಗಳು ಸುಬ್ಬನ್ ಸಾಬಿಯನ್ನೆ ಅಟ್ಟಿಸಿಕೊಂಡು ಹೊರಟವು. ಸುಬ್ಬನ್ ಸಾಬಿಗೆ ಕೈಕಾಲು ತೋಚದೆ ಪಕ್ಕದಲೇ ಇದ್ದ ಒಂಟಿತಾರೆ ಮರಕ್ಕೆ ಸರಸರನೆ ಎಗರಿಕೊಂಡ, ಮರದ ಕೆಳಗೆ ಒಳ್ಳೆ ಅಸಿದ ಬಕಸೂರರಂತೆ ಬಾಯಿಯನ್ನು ಬಿಟ್ಟುಕೊಂಡು ಬೌ. . .ಬೌ. . . ಎಂದು ಬೋಗಳುತ್ತಿದ್ದವು. ಬಿಸೋ ದೊಣ್ಣೆಗೆ ತಪ್ಪಿಸಿಕೊಂಡೆ ಎಂದು ಎದೆಯನ್ನು ಹಿಡಿದುಕೊಂಡು ನಿಟ್ಟುಸಿರು ಬಿಡುತ್ತಿದ್ದ ಸುಬ್ಬನ್ ಸಾಬಿಗೆ!, ಅದೆ ಮರದ

ತುದಿಯಲ್ಲಿ ಗೂಡು ಮಾಡಿದ ಕಾಗೆಗಳು ತಲೆ, ಕಿವಿ, ಮೂಗು ಎನ್ನದೆ ಹಿಗ್ಗ-ಮುಗ್ಗ ಕುಕ್ಕಿ ಬಾರಿಸುತ್ತಿದ್ದವು. ಸುಬ್ಬನ್ ಸಾಬಿಯೂ "ಅಯ್ಯೊಯ್ಯೋ ಇವ್ ಮನೆ ಹಾಳಗ!, ಬರ್‍ರ್ರೋ. . . ಈ ನಾಯಿಗಳನ್ನು ಇಡ್ಕೋಳ್ರೂ" ಎಂದು ಬಾಯಿ ಬಾಯಿ ಬಡಿದು ಕೊಳ್ಳುತ್ತಿದ್ದ. . .!, ನಾನು ತಿರುಗಿ ನೋಡದೆ ಕಾಲಿಗೆ ಬುದ್ಧಿ ಹೇಳಿ ಮನೆಯ ಕಡೆ ಒಂದೆ ಓಟ. . .!.



ಅರ್ಧ ತಾಸಿನ ನಂತರ ಮನೆಯ ಬಳಿ ಬಂದವನೆ ನನ್ನ ಮೇಲೆ ರೇಗಾಡಿದ "ಏ. . . ಏನೋ ಮಾರಾಯ  ನಾನೇನ್ ಮಾಡ್ದೆ ನಿಂಗೆ, ನಾನು ನಿನ್ನಂಗೆ ಓಡಿ ಬಂದೆ, ಮನೆ ಸೆರ್ಕೊಂಡೆ, ನೀನ್ ಯಾರ್ ಮರ ಅತ್ಕೊ ಅಂದ್ರು" ಎಂದೆ. "ಆ ಬೋಳಿ ಮಕ್ಳಗೆ ಬೇರೆ ಎಲ್ಲೂ ಜಾಗ ಇರ್ಲಿಲ್ವ. . . ಆ ರಾಕ್ಷಸ ನಾಯಿಗಳನ್ನ ಇಲ್ಲೆ ಇಡ್ಕೋ ಬರಬೇಕಿತ್ತಾ ಟ್ರಯ್ನಿಂಗಂತೆ ಟ್ರಯ್ನಿಂಗ್ . . .ಎಂದು ಬೈಯುತ್ತಾ. . . ಮರದಲ್ಲಿ ಕಾಗೆಗಳು ಕಚ್ಚಿದ ಮುಖ, ಮೂತಿ, ಕಿವಿ ಎಲ್ಲಾವನ್ನು ತೋರಿಸಿದ. "ಹೋಗ್ಲಿ ಬಿಡು ಸುಬ್ಬನ್ ಆ ನಾಯಿಗಳೆನಾದ್ರು ಕಚ್ಚಿದ್ರೆ ಒಕ್ಳುಸುತ್ತ ಹನ್ನೆರಡು ಸೂಜಿ ಹಾಕ್ಸೋಬೇಕಿತ್ತು. ನಿನ್ನ ಅದೃಷ್ಟ ಕಾಗೆಗೆ ಹಾಗೆನು ಹನ್ನೆರಡು ಇಂಜ್ಷನ್ ಇಲ್ಲ!. ಒಳ್ಳೆದೆ ಆಯ್ತು" ಎಂದೆ. ಸುಬ್ಬನ್ ಸಾಬಿಗೆ ಈ ಮಾತು ಕೇಳಿ ಮತ್ತಷ್ಟು ಕೋಪ ಬಂತು. ಹಾಗಾದ್ರೆ ನಂಗೆ ನಾಯಿ ಕಚ್ಚಬೇಕಿತ್ತಾ. . .! ಅಂದ. "ಏ. . . ಹಾಗೆನಿಲ್ಲ ಮಾರಾಯ ಅದ್ಕೆ ಯಾಕ್ ಕೋಪಮಾಡ್ಕೋತಿಯಾ" ಎಂದು ಸಮಾದಾನ ಮಾಡಿದೆ.

ಈ ಕಾಗೆಗಳು ಸಾಮಾನ್ಯವಾಗಿ ಒಂಟಿಮರಗಳ ತುದಿಯಲ್ಲಿ ಕಡ್ಡಿಗಳಿಂದ ಕೂಡಿದ ವೃತ್ತಾಕಾರದ ಗೂಡನ್ನು ಕಟ್ಟಿ ಏಪ್ರಿಲ್ ನಿಂದ ಜೂನ್ ತಿಂಗಳಲ್ಲಿ ನಾಲ್ಕು ಅಥವಾ ಐದು ತಿಳಿ ನೀಲಿ ಹಸಿರು ಬಣ್ಣದ ಮೊಟ್ಟೆಗಳಿಟ್ಟು ಮರಿಮಾಡುತ್ತವೆ. ಕಾಗೆಯ ಬಗ್ಗೆ ಹೆಚ್ಚಿನ ಮಾಹಿತಿ ನಿಮಗೆ ಬೇಕಾಗಿಲ್ಲ ಅನಿಸುತ್ತೆ!. ಭಾರತದಲ್ಲಿ ಸುಮಾರು ಜಾತಿಯ ಕಾಗೆಗಳಿದರು, ದಕ್ಷಿಣ ಭಾರತದಲ್ಲಿ ಎರಡು ಕಾಗೆಗಳು ಮಾತ್ರ ಕಂಡುಬರುತ್ತವೆ. ಒಂದು ಕಪ್ಪು ಕಾಗೆ (Jungle Crow) ಎರಡು ಬೂದು ಕಾಗೆ ( House Crow) ಸುಬ್ಬನ್ ಸಾಬಿಗೆ ಕಚ್ಚಿದ್ದು ಈ ಬೂದು ಕಾಗೆನೆ. ನಾವು ಕಾಗೆಗಳ ಸ್ವಭಾವ, ನಡತೆ, ಆವಾಸ, ಊಟ, ಎಲ್ಲವು ಸಾಮಾನ್ಯವಾಗಿ ಗಮನಿಸಿರುತ್ತಿರಿ. . . ಇಲ್ಲವಾದಲ್ಲಿ ಇನ್ನೂ ಮುಂದೆಯಾದರು ಕಾಗೆಗಳ ಬದುಕನ್ನು ಹಾಗೆ ಗಮನಿಸಿ, ಸುಬ್ಬನ್ ಸಾಬಿಯೂ ಕಾಗೆಗಳ ಆವಾಸ ಇತ್ಯಾದಿಗಳನ್ನು  ತಿಳಿಯದೆಯೇ ಇರಬೇಕು ಕಾಗೆಗಳ ಕೈಯಲ್ಲಿ ಕಚ್ಚಿಸಿಕೊಂಡಿದ್ದಿರಬೇಕು!.



- ಅಶ್ವಥ ಕೆ.ಎನ್

ವಿವಿ ಅಂಕಣ

# ವಿದ್ಯಾರ್ಥಿಗಾಗಿ ವಿಜ್ಞಾನ

## * ಡೋಡೋ ಹಾದಿಯಲ್ಲಿ ನೀಲಿ ಕಾಲಿನ ಬೂಬು

ದಿನದಿಂದ ದಿನಕ್ಕೆ ಗೆಲಪೊಗಸ್ ದ್ವೀಪದ ನೀಲಿ ಕಾಲಿನ ಬೂಬು ಹಕ್ಕಿಗಳ ಸಂಖ್ಯೆ ಕುಸಿಯುತ್ತಿದೆ. 1997ರಲ್ಲಿ ಸಾವಿರಾರು ಸಂಖ್ಯೆಯಲ್ಲಿದ್ದ ಈ ಹಕ್ಕಿಗಳ ಸಂಖ್ಯೆ ಕಳೆದ ಕೇವಲ 20 ವರ್ಷದಲ್ಲಿ ಅವುಗಳ ಸಂಖ್ಯೆಯಲ್ಲಿ ಶೇ 50% ಕುಸಿತ ಉಂಟಾಗಿದೆ ಎಂದು ವೇಕ್ ಪಾರೆಸ್ಟ್ ಯುನಿವರ್ಸಿಟಿಯ ಡೇವ್ ಅಂಡರ್ರ್ಸನ್ ರವರು ಪ್ರತಿಪಾದಿಸಿದ್ದಾರೆ.




ಕಳೆದ ವರ್ಷ ಕೆಲ ಪಕ್ಷಿಶಾಸ್ತ್ರಜ್ಞರ ಗುಂಪು ಈ ನೀಲಿ ಕಾಲಿನ ಬೂಬು ಹಕ್ಕಿಗಳು ಗೂಡು ಕಟ್ಟುವ ದ್ವೀಪಕ್ಕೆ ಭೇಟಿ ನೀಡಿದಾಗ ಅವರಿಗೆ ಅಲ್ಲಿ ಕಂಡದ್ದು ಕೇವಲ 134 ಬೂಬುಗಳ ಮಾತ್ರ. ನೀಲಿ ಕಾಲಿನ ಬೂಬು ಹಕ್ಕಿಗಳ ಮುಖ್ಯ ಆಹಾರ ಸರ್ಡೀನ್ ಮೀನು. ಸಾಗರದಲ್ಲಿ ಈ ಸರ್ಡೀನ್ ಮೀನಿನ ಸಂಖ್ಯೆ ಗಣನೀಯವಾಗಿ ಕುಸಿತ ಕಂಡಿದ್ದು. ಈ ಮೀನಿನ ಸಂಖ್ಯೆಯ ಕುಸಿತದ ದೆಸೆಯಿಂದ ಬೂಬು ಹಕ್ಕಿಗಳು ಬದುಕಲು ಸಾಕಾಗುವಷ್ಟು ಮಾತ್ರ ದೊರೆಯುತಿದ್ದು, ಇವು ಸಂತಾನ ಉತ್ಪತ್ತಿ ಮಾಡಿ ಮರಿಗಳನ್ನು ಸಾಕಲು ಸಾಕಾಗುವಷ್ಟು ಮೀನು ಸಿಗುತ್ತಿಲ್ಲ. ಸಾರ್ಡೀನ್ ಮೀನಿನ ಕೊರತೆಗೆ ಕಾರಣ ಇನ್ನ ನಿಗೂಡವಾಗೇ ಇದೆ. ನಮಗೆ ತಿಳಿದಿದ್ದರೂ?!. ನಾವೇ ಈ ಸಾರ್ಡೀನ್ ಮೀನುಗಳನ್ನು ಹಿಡಿದು ತಿಂದಿರಬಹುದು. ಇಲ್ಲವೆಂದರೆ ಜಾಗತಿಕ ತಾಪಮಾನದ ವೈಪರಿತ್ಯದಿಂದಾಗಿ ಸಾರ್ಡೀನ್ ಮೀನುಗಳು ಬೇರೆಲ್ಲೋ ದೂರದ ತೀರಕ್ಕೆ ವಲಸೆ ಹೋಗಿರಬೇಕು. ಕಳೆದ ಕೆಲವು ವರ್ಷದಿಂದ ಈ ಬೂಬು ಹಕ್ಕಿಗಳು ಮೊಟ್ಟೆ ಇಟ್ಟು ಮರಿ ಮಾಡದೇ ಇರುವುದರಿಂದ ಗುಂಪಿನಲ್ಲಿ ಈಗ ಬದುಕಿರುವ ಹಕ್ಕಿಗಳ ಸರಾಸರಿ ಜೀವಿತ ಅವಧಿ ಮುಗಿಯುತ್ತ ಬಂದು ಮುದಿಯಾಗುತ್ತಿವೆ. ಹೀಗೆ ಮುಂದುವರಿದರೇ ಈ ಮುದಿ ಬೂಬುಹಕ್ಕಿಗಳಿಗೆ ಸಂತಾನ ಪ್ರಾಪ್ತಿಯಾಗುವುದು ಕಷ್ಟಸಾಧ್ಯ. ಒಂದು ವೇಳೆ ಬದುಕಿರುವ ಮುದಿ ಬೂಬು ಹಕ್ಕಿಗಳು ಮೊಟ್ಟೆಯಿಟ್ಟು ಅದರಿಂದ ಮರಿಗಳು ಹೊರ ಬಂದರೂ ಮರಿಗಳ ಉಳಿವು ತುಂಬ ಕಷ್ಟಕರ. ಆದ್ದರಿಂದ ಆ ಮರಿಗಳನ್ನು ಈ ಮುದಿ ಹಕ್ಕಿಗಳು ಲಾಲನೆ ಪೋಷಣೆಯಲ್ಲಿ ದೊಡ್ಡದಾಗಿ ವಂಶ ಉಳಿಯುವುದು ಅನುಮಾನವೇ? ಎನ್ನುತ್ತಾರೆ *ಡೇವ್ ಆಂಡರ್ಸನ್*. ಇದಕ್ಕೆಲ್ಲಾ ಮಾನವರಾದ ನಮ್ಮನ್ನು ನೇರ ಹೊಣೆಗಾರನ್ನನ್ನಾಗಿ ಮಾಡಿಲ್ಲವಾದರೂ ಗೆಲಪೊಗಸ್ ನ ನೀಲಿ ಕಾಲಿನ ಬೂಬುಹಕ್ಕಿಯ ವಂಶನಾಶಕ್ಕೆ ಮಾನವನ ಕೊಡುಗೆ ಇಲ್ಲ ಎಂದಲ್ಲಾ!



- ಶಂಕರಪ್ಪ ಕೆ.ಪಿ

# ಕಾನನ ಬಂಧ




### ಎಡದಿಂದ ಬಲಕ್ಕೆ

1. ಈ ಪಕ್ಷಿಗೆ ಮರ ಕುಟ್ಟುವುದೊಂದೇ ಕೆಲಸ (5)

2. ಈ ಊರಿನ ನೆಲದಲ್ಲಿ ವಾನರನೊಬ್ಬನಿದ್ದಾನೆ (5)

4. ಜೀವಿಯ ದೇಹದಲ್ಲಿ ಸಂತತಿಯ ಗುರುತನ್ನು ಒಯ್ಯುವ ರಾಸಾಯನಿಕ (5)

6. ಈ ರಾಕ್ಷಸನ ಬಳಿ ತುಂಬಾ ರೊಕ್ಕವಿದೆ (3)

9. ಪಕ್ಷಿಗಳ ಮೂಲಭೂತ ಚಟುವಟಿಕೆ (3)

10. ಪತ್ತೇದಾರರು ಹುಡುಕುವ ಸಾಮಾನ್ಯ ವಿಷಯ (3)

12. ಈ ದರ್ಶಕಕ್ಕೆ ಅಪಾರ ಬೆಲೆಯೇನೂ ಇಲ್ಲ ಬಿಡಿ (5)

14. ಇದು ಗ್ರಹಕ್ಕೆ ಸಂಬಂಧಿಸಿದ ವಿಷಯವಲ್ಲ ಆದರೆ ಊಹಿಸಬಹುದು (3)

15. ವರನದು ಇದೆಂಥ ಅವತಾರವಯ್ಯ (3)

16. ಶ್ರವಣಬೆಳಗೊಳದ ಬಾಹುಬಲಿಗೆ 12 ವರ್ಷಕ್ಕೊಮ್ಮೆ ಮಾತ್ರ ಸಿಗುವ ಭಾಗ್ಯ (3)

### ಮೇಲಿನಿಂದ ಕೆಳಕ್ಕೆ

1. ಈ ಮುದ್ದಾದ ಆನೆಗೆ ಸೊಕ್ಕೇರಿದೆ (3)

3. ಪರಿಮಳಯುಕ್ತ ಸಾಂಬಾರ ಪದಾರ್ಥವೊಂದು ಇಲ್ಲಿ ತಲೆಕೆಳಗಾಗಿದೆ (3)

5.ವಾರಕ್ಕೂ ಈತನಿಗೂ ಸಂಬಂಧವಿಲ್ಲ ಆದರೆ ಈತ ನರನಲ್ಲ ಬಿಡಿ (3)

7. ನಿರ್ಗಮನ ಎನ್ನುವ ಶಬ್ದಕ್ಕೆ ಈ ಅರ್ಥವೂ ಉಂಟು (3)

8.ಮಂಡಲ ಪಂಚಾಯತಿಗೂ ಈ ಹಾವಿಗೂ ಸಂಬಂಧವಿಲ್ಲ ಬಿಡಿ (5)

11. ಅಂಚೆಗೆ ಇನ್ನೊಂದು ಹೆಸರು ಆದರೆ ಪಾಲು ಮಾಡಲು ಆಗದು (3)

13.ಈತ ಗೋಪಾಲಕರ ವೃತ್ತಿಗೆ ಸೇರಿದವ (4)

14. ಸೂರ್ಯನಿಗೂ ತಪ್ಪಿಸಿಕೊಳ್ಳಲಾಗದ ಸಂಕಷ್ಟ (3)

15. ಇದೊಂದು ಪುಟ್ಟ ಕಾಡು (2)

17. ಶ್ರೀ ಕುವೆಂಪುರವರು ಬರೆದ ಗೀತೆಯಲ್ಲಿ ಶಿವನ ವಾದ್ಯವೂ ಇದೆ (3)

## ಕಾನನ ಬಂಧ ಮಾರ್ಚ್ ಸಂಚಿಕೆಯ ಉತ್ತರಗಳು

### ಎಡದಿಂದ ಬಲಕ್ಕೆ

1. ಉಭಯ ಜೀವಿ, 2. ಗತಸಾಹಸ, 4.ಕಾಕನಕೋಟೆ, 6.ಪೇಚಾಟ, 8. ಗಜಪಡೆ, 9. ಭರಣಿ, 11.ಅಕಶೇರುಕ, 12.ಹಸಿರುಹಾವು, 14.ನಿಧನ, 17.ಮಡಿವಾಳ ಹಕ್ಕಿ.

### ಮೇಲಿನಿಂದ ಕೆಳಕ್ಕೆ

1.ಉರಗ, 3. ವಿಕಾಸ, 5.ನರಭಕ್ಷಕ, 6.ಪೇಟೆ, 7.ಟಗರು, 10.ಹರಿಣಿ, 13.ಕಬಿನಿ, 15. ರುಜಿನ, 16.ಹಾರುಹಕ್ಕಿ, 18. ಹಕ್ಕಿಲೋಕ

- ಸುಬ್ಬು ಬಾದಲ್


WCG
ಪ್ರಕೃತಿ ಬಿಂಬ



# ಪರಿಸರ ದಿನ

ಹುಡುಕಿ ಹೊರಟೆವು ನಾವಿಂದು
ಹುಡುಕಿ ಹೊರಟೆವು ನಾವಿಂದು

ನಮ್ಮಿಂದ ಬಲುದೂರದ ಉದ್ಯಾನವನವ
ಕಾಣಸಿಗದ ಅಪರೂಪದ ಪ್ರಾಣೀಪಕ್ಷಿಗಳ
ಸುಂದರ ಮನೋಹರ ಜಲಧಾರೆಯ
ಈ ನಗರೀಕೃತ ಕಾನನದೊಳಗೆ

ಎಲ್ಲಿ  ತಾನೇ ಇರುವುದು ನನ್ನ  ಬಯಕೆ
ಆ ಉದ್ಯಾನವನ ಆ ಸುಂದರ ಗಿರಿಶೃಂಗ
ಎಲ್ಲವನು ಸಂಹರಿಸಿ ಹುಡುಕುತಿರಬೇಕೆ?
ಜ್ಞಾನೋದಯದ ಬೆಳಕು ಇಂದು ಚೆಲ್ಲಿದೆ ನಮಗೆ

ಕೇವಲ ಒಂದೇ ಶತಮಾನದೊಳು ಜಗವಾಳೋ ದೊರೆ
ಜಾಗತೀಕರಣ ತಂತ್ರಜ್ಞಾನವೇ ನನಗೆ ಸಾಕೆಂದೇ
ಇಂದೇಕೆ? ಪರಿಸರ ಸಂರಕ್ಷಣೆಯ ಕೂಗು
ಆರ್ಥಿಕತೆಯ ಒಂದಿನೊಳು ಸಂರಕ್ಷಣೆ ಎಷ್ಟು?

ಕ್ಷೀಣಿಸುತ್ತಿರುವ ಪ್ರಭೇದಗಳು ಸಹಸ್ರ ಸಹಸ್ರ
ಇನ್ನಾದರೂ ತಟಸ್ಥನಾಗು ನಿನ್ನ ಪ್ರಾಭಲ್ಯಕೆ
ಅಂಕುಶವಿಡು ಹೊಸ ಚಿಗುರು ಹಸಿರ ಹಾಸು
ಈ ಧರೆಯ ನಿರ್ಮಲತೆಯನು ಸಹಜವಾಗಿಸು

ಇಂದಿನಿಂದಾದರೂ ವನಪಾಲನೆಯ ಮಾಡೋಣ
ಪ್ರಕೃತಿಯ ಮುನಿಸನ್ನ ಸ್ವಲ್ಪವಾದರೂ ಸಡಿಲಿಸೋಣ.

- ಕೃಷ್ಣನಾಯಕ್



ಕಾನನ ಪತ್ರಿಕೆಯಲ್ಲಿ “ವಿಶ್ವ ಭೂದಿನ”ದ ವಿಶೇಷವಾಗಿ ಬಹುಮಾನ ಗೆದ್ದ ವರ್ಣಚಿತ್ರ